ಐಸಿಎಆರ್ ಜೆಎಸ್‌ಎಸ್
ಕೃಷಿ ವಿಜ್ಞಾನ ಕೇಂದ್ರ, ಸುತ್ತೂರು

# ತೋಟಗಾರಿಕೆ ಬೆಳೆಗಳು

ಲೇಖಕರು
ಶ್ರೀ ಶ್ರೀನಿವಾಸ ಮಂಕಣಿ, ಶ್ರೀಮತಿ ದಿವ್ಯಾ ಹೆಚ್.ಎ., ಶ್ರೀಮತಿ ನೇತ್ರಾವತಿ ಎಂ. ಎತ್ತಿನಮನಿ



# ತೋಟಗಾರಿಕೆ ಬೆಳೆಗಳು

## ಹೀರೇಕಾಯಿ (ನಾಗಾ)

**ಗಿಡ:** ಸದೃಢ ಹಾಗೂ ಹೆಚ್ಚು ಇಳುವರಿಕೊಡುವ ತಳಿ

**ಕಾಯಿ:** ಉದ್ದನೆಯ ಆಳವಾದ ಆಕರ್ಷಕ ಹಸಿರು ಬಣ್ಣ, 35-45 ಸೆಂ.ಮೀ ಉದ್ದ, 200-220 ಗ್ರಾಂ ತೂಕ ಹೊಂದಿರುತ್ತದೆ

**ಮೊದಲನೇ ಕಟಾವು:** ಬಿತ್ತನೆಯಾದ 50-55 ದಿನಕ್ಕೆ

**ಇಳುವರಿ:** 15-18ಟನ್/ಎಕರೆಗೆ

## ಹೀರೇಕಾಯಿ (ವರ್ಷಾ)

**ಗಿಡ:** ಸದೃಢ ಹಾಊ ಹೆಚ್ಚು ಇಳುವರಿಕೊಡುವ ತಳಿ ಗಾಢ ಹಸಿರು ಬಣ್ಣದ ಎಲೆ, **ಬೂದುರೋಗ ತಡೆದುಕೊಳ್ಳುವ ಶಕ್ತಿ ಹೊಂದಿದೆ**

**ಕಾಯಿ:** 40-45 ಸೆಂ.ಮೀ ಉದ್ದ, 250-300 ಗ್ರಾಂ ತೂಕ ಹೊಂದಿರುತ್ತದೆ

**ಮೊದಲನೇ ಕಟಾವು:** ಬಿತ್ತನೆಯಾದ 60-65 ದಿನಕ್ಕೆ

**ಇಳುವರಿ:** 12-15ಟನ್/ಎಕರೆಗೆ



## ಹಾಗಲಕಾಯಿ (ಪಾಲಿ)

**ಗಿಡ:** ಹೆಚ್ಚು ಇಳುವರಿಕೊಡುವ ತಳಿ

**ಕಾಯಿ:** ಉದ್ದನೆಯ ಗಾಢ ಹಸಿರು ಬಣ್ಣ, ಮುಳ್ಳುಗಳಿಂದ ಕೂಡಿದ್ದು, 20-22 ಸೆಂ.ಮೀ ಉದ್ದ, 200-220 ಗ್ರಾಂ ತೂಕ ಹೊಂದಿರುತ್ತದೆ

**ಮೊದಲನೇ ಕಟಾವು:** ಬಿತ್ತನೆಯಾದ 50-55 ದಿನಕ್ಕೆ

**ಇಳುವರಿ:** 18-20ಟನ್/ಎಕರೆಗೆ

## ಹಾಗಲಕಾಯಿ (ಮಾಯಾ)

**ಗಿಡ:** ಹೆಚ್ಚು ಇಳುವರಿಕೊಡುವ ತಳಿ. ಕಟಾವಿನ ನಂತರ ಬಹಳ ದಿನದವರೆಗೆ ಕಾಯಿ ಕೆಡುವುದಿಲ್ಲ.

**ಕಾಯಿ:** ಉದ್ದನೆಯ ಆಳವಾದ ಆಕರ್ಷಕ ಬಿಳಿ ಬಣ್ಣ, 20-22 ಸೆಂ.ಮೀ ಉದ್ದ,

**ಮೊದಲನೇ ಕಟಾವು:** ಬಿತ್ತನೆಯಾದ 50-55 ದಿನಕ್ಕೆ

**ಇಳುವರಿ:** 18-20ಟನ್/ಎಕರೆಗೆ

## ಹಾಗಲಕಾಯಿ (616)

**ಗಿಡ:** ಹೆಚ್ಚು ಇಳುವರಿಕೊಡುವ ತಳಿ

**ಕಾಯಿ:** ಮುಳ್ಳುಗಳು ಹೆಚ್ಚಿದ್ದು, ತಿಳಿ ಹಸಿರು ಹೊಳಪಿನಿಂದ ಕೂಡಿರುತ್ತದೆ. ಕಾಯಿಯ ಉದ್ದ 20-25 ಸೆಂ.ಮೀ ಉದ್ದ, 225-250 ಗ್ರಾಂ ತೂಕ ಹೊಂದಿರುತ್ತದೆ

**ಮೊದಲನೇ ಕಟಾವು:** ಬಿತ್ತನೆಯಾದ 60-65ದಿನಕ್ಕೆ

**ಇಳುವರಿ:** 18-20ಟನ್/ಎಕರೆಗೆ



## ಬದನೆ (ಲಲಿತಾ)

**ಗಿಡ:** ಅಲ್ಪಾವಧಿ ತಳಿಯಾಗಿದ್ದು, ಸ್ವಲ್ಪ ಅಂಕು ಡೊಂಕಾಗಿ ಬೆಳೆಯುವ ಗಿಡ, ಪೊದೆಯಾಕಾರಾವಾಗಿ ಬೆಳೆಯುತ್ತದೆ

**ಕಾಯಿ:** ಕಾಯಿಗಳು ನೇರಳೆ ಬಣ್ಣ ಹೊಂದಿದ್ದು, ಬಿಳಿ ಗೆರೆಗಳು ಇರುತ್ತವೆ. ಮುಳ್ಳುರಹಿತ, ಹೊಳೆಯುವ 60-70 ಗ್ರಾಂ ತೂಕ ಹೊಂದಿರುತ್ತವೆ. ತೊಟ್ಟು ಬಹಳ ದಿನದವರೆಗೆ ಕಾಯಿಯನ್ನು ಹಿಡಿದಿಟ್ಟಿರುತ್ತದೆ.

**ಮೊದಲನೇ ಕಟಾವು:** ನಾಟಿಯಾದ 45-50 ದಿನಕ್ಕೆ

**ಇಳುವರಿ:** 8-10ಟನ್/ಎಕರೆಗೆ

## ಬದನೆ (ಜಮುನಿ)

**ಗಿಡ:** ನೇರವಾಗಿ ಬೆಳೆಯುವ ಗಿಡ

**ಕಾಯಿ:** ಕಾಯಿಗಳು ಗಾಢ ನೇರಳೆ ಬಣ್ಣ ಹೊಂದಿದ್ದು, ಅಂಡಾಕಾರವಾಗಿರುತ್ತವೆ.

**ಮೊದಲನೇ ಕಟಾವು:** ನಾಟಿಯಾದ 50-55 ದಿನಕ್ಕೆ

**ಇಳುವರಿ:** 8-10ಟನ್/ಎಕರೆಗೆ





## ಮೆಣಸಿನಕಾಯಿ (ಉಲ್ಕಾ)

**ಗಿಡ:** ಸದೃಢವಾದ ಗಿಡ, ಗಟ್ಟಿಯಾದ ರೆಂಬೆಗಳನ್ನು ಹೊಂದಿರುತ್ತದೆ.

**ಕಾಯಿ:** ಆಕರ್ಷಕ ಹಸಿರು ಬಣ್ಣ, ಮೆದು ಹೊರಗಿನ ಪದರ ಹೊಂದಿದ್ದು 8-9 ಸೆಂ.ಮೀ ಉದ್ದವಿದ್ದು, 1-1.2 ಸೆಂ.ಮೀ ದಪ್ಪವಿರುತ್ತದೆ. ಹೆಚ್ಚು ಖಾರವಿದ್ದು, ಹಸಿರು ಹಾಗು ಒಣಮೆಣಸಿನಕಾಯಿಗೆ ಸೂಕ್ತವಾದ ತಳಿ.

**ಮೊದಲನೇ ಕಟಾವು:** ನಾಟಿಯಾದ 70-75 ದಿನಕ್ಕೆ

**ಇಳುವರಿ:** 10-12ಟನ್/ಎಕರೆಗೆ

## ಮೆಣಸಿನಕಾಯಿ (US 344)

**ಗಿಡ:** ಗಿಡ ಸ್ವಲ್ಪ ಅಂಕು ಡೊಂಕಾಗಿದ್ದು, ಹೆಚ್ಚು ಸದೃಢವಾದ ಗಿಡ.

**ಕಾಯಿ:** ಆಕರ್ಷಕ ಹಸಿರು ಬಣ್ಣ, ದೂರದ ಪ್ರದೇಶಕ್ಕೆ ರಫ್ತು ಮಾಡಲು ಯೋಗ್ಯವಾದ ತಳಿ. ಕಾಯಿಗಳು 13-14 ಸೆಂ.ಮೀ ಉದ್ದವಿದ್ದು, 1.3 ಸೆಂ.ಮೀ ದಪ್ಪವಿರುತ್ತದೆ. ಹೆಚ್ಚು ಖಾರವಿದ್ದು, ಹಸಿರು ಹಾಗು ಒಣಮೆಣಸಿನಕಾಯಿಗೆ ಸೂಕ್ತವಾದ ತಳಿ.

**ಮೊದಲನೇ ಕಟಾವು:** ನಾಟಿಯಾದ 55-60 ದಿನಕ್ಕೆ

**ಇಳುವರಿ:** 10-12ಟನ್/ಎಕರೆಗೆ

## ಮೆಣಸಿನಕಾಯಿ (ಹಕೋನೆ)

**ಗಿಡ:** ನೇರವಾಗಿ ಬೆಳೆಯುವ ಗಿಡ.

**ಕಾಯಿ:** 12-13ಸೆಂ.ಮೀ ಉದ್ದ. ಹಸಿರು ಬಣ್ಣದ ನಾರುರಹಿತ ಕಾಯಿಗಳು

**ಮೊದಲನೇ ಕಟಾವು:** ನಾಟಿಯಾದ 55-60 ದಿನಕ್ಕೆ

**ಇಳುವರಿ:** 20-22ಟನ್/ಎಕರೆಗೆ

## ಟೊಮ್ಯಾಟೊ (NS 526)



**ಗಿಡ:** ಅಲ್ಪಾವಧಿ ಸಂಕರಣ ತಳಿ. ಮಳೆಗಾಲ ಹಾಗು ಚಳಿಗಾಲಕ್ಕೆ ಸೂಕ್ತವಾದ ಸಂಕರಣ ತಳಿ. ಗಿಡಗಳು ಮಧ್ಯಮ ಬೆಳವಣಿಗೆಯನ್ನು ಹೊಂದಿದ್ದು, ಹೆಚ್ಚು ಎಲೆಗಳಿಂದ ಕೂಡಿರುತ್ತವೆ.

**ಕಾಯಿ:** 80-90 ಗ್ರಾಂ ತೂಕ ಹೊಂದಿದ್ದು, ಗಟ್ಟಿಯಾಗಿರುತ್ತದೆ. ಕಾಯಿಗಳು ಅಂಡಾಕಾರವಾಗಿದ್ದು ತಿಳಿ ಹಸಿರು ಭುಜಗಳನ್ನು ಹೊಂದಿರುತ್ತವೆ

**ಮೊದಲನೇ ಕಟಾವು:** ನಾಟಿಯಾದ 70-75 ದಿನಕ್ಕೆ

**ಇಳುವರಿ:** 25-30ಟನ್/ಎಕರೆಗೆ

## ಟೊಮ್ಯಾಟೊ (ನೂತನ್)

**ಗಿಡ:** ಗಿಡವು 150-190 ಸೆಂ.ಮೀ ಉದ್ದದವರೆಗೂ ಬೆಳೆಯುತ್ತಲೇ ಇರುತ್ತದೆ.

**ಕಾಯಿ:** ದುಂಡಗಿದ್ದು, ಗಾಢ ಕೆಂಪು ಬಣ್ಣದಿಂದ ಕೂಡಿದ್ದು, ಹೊಳೆಯುವ ಪದರ ಹಾಗೂ ಗಟ್ಟಿ ತಿರುಳನ್ನು ಹೊಂದಿದೆ. 80-90 ಗ್ರಾಂ ತೂಕ ಬರುತ್ತವೆ. ಈ ತಳಿಯನ್ನು ತರಕಾರಿಗೆ ಹಾಗು ಸಂಸ್ಕರಣೆ ಎರಡಕ್ಕೂ ಬಳಸಬಹುದು.

**ಮೊದಲನೇ ಕಟಾವು:** ನಾಟಿಯಾದ 65-70 ದಿನಕ್ಕೆ

**ಇಳುವರಿ:** 30-35ಟನ್/ಎಕರೆಗೆ

## ಟೊಮ್ಯಾಟೊ (ಎಮರಾಲ್ಡ್)

**ಗಿಡ:** ಗಿಡವು ನಿರ್ದಿಷ್ಠ ಬೆಳವಣಿಗೆಯನ್ನು ಹೊಂದಿದೆ. ಗಿಡವು ಉತ್ತಮವಾಗಿ ಬೆಳೆದು, ಹೆಚ್ಚಿನ ಎಲೆಗಳನ್ನು ಹೊಂದಿರುತ್ತದೆ

**ಕಾಯಿ:** ಕಾಯಿಗಳು ಅಂಡಾಕಾರವಾಗಿದ್ದು, ಒಮ್ಮಟ್ಟಕ್ಕೆ ಗಾಢ ಕೆಂಪು ಬಣ್ಣ ಹೊಂದಿದ್ದು, ಮೆದುವಾದ ಹೊರ ಪದರ ಹೊಂದಿರುತ್ತದೆ.

**ಮೊದಲನೇ ಕಟಾವು:** ನಾಟಿಯಾದ 60-65 ದಿನಕ್ಕೆ

**ಇಳುವರಿ:** 35-40ಟನ್/ಎಕರೆಗೆ

## ಪೋಲ್ ಬೀನ್ಸ್ (ಬೆಳ್ಳಿ)

**ಗಿಡ:** ಹೆಚ್ಚಿನ ಉಷ್ಣಾಂಶಕ್ಕೆ ಹೊಂದಿಕೊಳ್ಳುವ ಗುಣ ಹೊಂದಿದೆ. ಹೆಚ್ಚು ರೋಗ ನಿರೋಧಕ ಶಕ್ತಿ ಹೊಂದಿದೆ. ಹೆಚ್ಚು ಇಳುವರಿಕೊಡುವ ತಳಿ

**ಕಾಯಿ:** 12-13 ಸೆಂ.ಮೀ ಉದ್ದ, ಹಸಿರು ಬಣ್ಣದ ನಾರುರಹಿತ ಕಾಯಿಗಳು

**ಮೊದಲನೇ ಕಟಾವು:** ನಾಟಿಯಾದ 52-55 ದಿನಕ್ಕೆ

**ಇಳುವರಿ:**10-12ಟನ್/ಎಕರೆಗೆ

## ಕುಂಬಳಕಾಯಿ (ಅರ್ಜುನ್)

**ಗಿಡ:** ಹೆಚ್ಚು ಇಳುವರಿಕೊಡುವ ತಳಿ

**ಕಾಯಿ:** ಚಪ್ಪಟೆ ಗುಂಡಾಕಾರದ, ಎಳೆಕಾಯಿಯು ಗಾಢ ಹಸಿರು ಬಣ್ಣದಿಂದ ಕೂಡಿದ್ದು, ಬಲಿತಾಗ ಸಿಪ್ಪೆ ಹಾಗು ತಿರುಳು ಹಳದಿ ಕಿತ್ತಳೆ ಬಣ್ಣಕ್ಕೆ ತಿರುಗುತ್ತದೆ. 4-5 ಕೆಜಿ ಕಾಯಿ ತೂಕವಾಗಿರುತ್ತದೆ.

**ಮೊದಲನೇ ಕಟಾವು:** ಬಿತ್ತನೆಯಾದ 80-85 ದಿನಕ್ಕೆ

**ಇಳುವರಿ:** 15-18ಟನ್/ಎಕರೆಗೆ

## ಗೋರಿ ಕಾಯಿ (ಸ್ಥಳೀಯ)

**ಗಿಡ:** ನೇರವಾದ ಗಿಡ

**ಕಾಯಿ:** 8ಸೆಂ.ಮೀ ಉದ್ದ, ತಿಳಿ ಹಸಿರು ಬಣ್ಣ

**ಮೊದಲನೇ ಕಟಾವು:** ಬಿತ್ತಬೆಯಾದ 45 ದಿನದಿಂದ

**ಇಳುವರಿ:** 2ಟನ್/ಎಕರೆಗೆ

## ಗೋರಿ ಕಾಯಿ (ರಾಣಿ)

**ಗಿಡ:** ಹೆಚ್ಚು ಇಳುವರಿಕೊಡುವ ತಳಿ

**ಕಾಯಿ:** 12 ಸೆಂ.ಮೀ ಉದ್ದ, ನಾರುರಹಿತ ಕಾಯಿಗಳು

**ಮೊದಲನೇ ಕಟಾವು:** ಬಿತ್ತನೆಯಾದ 45-50 ದಿನಕ್ಕೆ

**ಇಳುವರಿ:** 3ಟನ್/ಎಕರೆಗೆ

## ಅವರೆ (ಹೆಚ್‌ಎ3)

**ಗಿಡ:** ನಿರ್ದಿಷ್ಠ ಬೆಳವಣಿಗೆ ಹೊಂದುವ ತಳಿ, 65 ರಿಂದ 75 ಸೆಂ.ಮೀ ಎತ್ತರ ಬೆಳೆಯುತ್ತದೆ. ನೇರವಾದ ಗಿಡ. ವರ್ಷಪೂರ್ತಿ ಬೆಳೆಯಬಹುದಾದ ತಳಿ

**ಕಾಯಿ:** ಕಾಯಿಯು ಚಪ್ಪಟೆಯಾಗಿದ್ದು 3 ರಿಂದ 4 ಬೀಜಗಳನ್ನು ಹೊಂದಿರುತ್ತದೆ. ಒಣಗಿದ ಬೀಜವು ದುಂಡಗೆ, ಸಣ್ಣಗೆ ಹಾಗೂ ಕಂದು ಬಣ್ಣದಿಂದ ಕೂಡಿರುತ್ತದೆ

**ಮೊದಲನೇ ಕಟಾವು:** ಎಳೆಯ ಕಾಯಿಗಳು ಬಿತ್ತಿದ 70 ರಿಂದ 75 ದಿನದಲ್ಲಿ ಕೊಯ್ಲಿಗೆ ಬರುತ್ತವೆ. ಬೀಜೋತ್ಪಾದನೆಯನ್ನು 85 ರಿಂದ 95 ದಿನಗಳಲ್ಲಿ ಮಾಡಬಹುದು; ಇಳುವರಿ ಪಡೆಯಬಹುದಾಗಿದೆ.

**ಇಳುವರಿ:** ಹಸಿರು ಕಾಯಿ 4 ಟನ್/ಎಕರೆಗೆ ಹಾಗು ಒಣ ಬೀಜ 2.5 ರಿಂದ 3.5 ಕ್ವಿಂಟಾಲ್/ಎಕರೆಗೆ



## ಕ್ಯಾರೇಟ್ (ನ್ಯೂ ಕೂರೋಡಾ)

**ಗಿಡ:** ಸದೃಢವಾದ ಗಿಡ, ಗಾಢ ಹಸಿರು ಬಣ್ಣದ ಎಲೆಗಳು, ರಫ್ತಿಗೆ ಸೂಕ್ತವಾದ ತಳಿ

**ಬೇರು:** ಕ್ಯಾರೆಟ್ ಉದ್ದ 18-20 ಸೆಂ.ಮೀ, 4-5 ಸೆಂ.ಮೀ ದಪ್ಪ, 200 ಗ್ರಾಂ. ತೂಕ. ತೆಳುವಾದ ಮೇಲ್ಪದರ, ಕಿತ್ತಳೆ ಕೆಂಪು.

**ಕಟಾವು:** ಬಿತ್ತನೆಯಾದ 90-100 ದಿನಕ್ಕೆ

**ಇಳುವರಿ:** 12-15ಟನ್/ಎಕರೆಗೆ

## ಕ್ಯಾರೇಟ್ (ಸ್ಥಳೀಯ)

**ಗಿಡ:** ಎತ್ತರವಾದ ತಿಳಿ ಹಸಿರು ಬಣ್ಣದ ತಳಿ

**ಕಟಾವು:** ಬಿತ್ತನೆಯಾದ 100-110 ದಿನಗಳು

**ಬೇರು:** ಕ್ಯಾರೆಟ್ ಉದ್ದ 20-25 ಸೆಂ.ಮೀ, 3-4 ಸೆಂ.ಮೀ ದಪ್ಪ, 150 ಗ್ರಾಂ. ತೂಕ.

**ಕಟಾವು:** ಬಿತ್ತನೆಯಾದ 100-120 ದಿನಕ್ಕೆ

**ಇಳುವರಿ:** 10-12ಟನ್/ಎಕರೆಗೆ

## ಎಲೆ ಕೋಸು (ಉನ್ನತಿ)




**ಗಿಡ:** ಗಡ್ಡೆಗಳು ದೊಡ್ಡದಾಗಿದ್ದು, ಎಲೆಗಳು ಅಗಲವಾದ ನೀಲಿ ಹಸಿರು ಬಣ್ಣದ್ದಾಗಿದೆ.

**ಗಡ್ಡೆ:** ಗಡ್ಡೆ ಮಧ್ಯಮ ಗಾತ್ರದ ಗುಂಡನೆ ಚಪ್ಪಟೆಯಾಕಾರವಾಗಿದ್ದು, 2-2.5 ಕೆಜಿ ತೂಕವಿರುತ್ತದೆ.

**ವಿಶೇಷತೆ:** ದುಂಡಾಣು ಕಪ್ಪು ಕೊಳೆರೋಗ ನಿರೋಧಕ ಹಾಗು ವಜ್ರ ಬೆನ್ನಿನ ಪತಂಗದ ಬಾಧೆಯನ್ನು ತಡೆದುಕೊಳ್ಳುವ ಶಕ್ತಿಯನ್ನು ಹೊಂದಿದೆ.

**ಕಟಾವು:** ನಾಟಿಯಾದ 80-85 ದಿನಕ್ಕೆ

**ಇಳುವರಿ:** 25-30ಟನ್/ಎಕರೆಗೆ

## ಫ್ರೆಂಚ್ ಬೀನ್ಸ್ (ಹ್ಯಾರಿಕೋಟ್)

**ಗಿಡ:** ಪೊದೆಯಾಕಾರದ ಗಿಡ, ನೇರವಾದ ಎಲೆ, ಎಲ್ಲಾ ಪ್ರದೇಶಕ್ಕೆ ಸೂಕ್ತ

**ಕಾಯಿ:** ಕಡು ಹಸಿರು, ನಾರು ರಹಿತ ಕಾಯಿ, ಉದ್ದ 13-14 ಸೆ.ಮೀ

**ಮೊದಲನೇ ಕಟಾವು:** ಬಿತ್ತನೆಯಾದ 40-45 ದಿನಕ್ಕೆ

**ಇಳುವರಿ:** 6-7ಟನ್/ಎಕರೆಗೆ

## ಫ್ರೆಂಚ್ ಬೀನ್ಸ್ (ಅನೂಪ್)

**ಗಿಡ:** ಸದೃಢವಾದ ಕಡು ಹಸಿರು ಹೊಳೆಯುವ ಎಲೆ, ಸೊರಗು ಹಾಗು ತುಕ್ಕು ರೋಗ ತಡೆದುಕೊಳ್ಳುವ ಶಕ್ತಿ ಹೊಂದಿದೆ.

**ಕಾಯಿ:** ಕಡು ಹಸಿರು, ದುಂಡಾಕಾರದ ಹೊಳೆಯುವ ನಾರು ರಹಿತ ಕಾಯಿ, ಉದ್ದ 12-14 ಸೆಂ.ಮೀ

**ಮೊದಲನೇ ಕಟಾವು:** ಬಿತ್ತನೆಯಾದ 40-45 ದಿನಕ್ಕೆ

**ಇಳುವರಿ:** 6-7ಟನ್/ಎಕರೆಗೆ

## ಫ್ರೆಂಚ್ ಬೀನ್ಸ್ (ಅರ್ಕಾ ಅರ್ಜುನ್)



**ಗಿಡ:** ಸದೃಢವಾದ ಪೊದೆಯಾಕಾರದ ಗಿಡ, ಹಳದಿ ನಂಜಾಣು ರೋಗ ನಿರೋಧಕ ಶಕ್ತಿ ಹೊಂದಿದೆ.

**ಕಾಯಿ:** ಹಸಿರು ನಾರು ರಹಿತ ಕಾಯಿ, ಮೃದುವಾದ ಹೊರಗಿನ ಪದರ ಹೊಂದಿದೆ.

**ಮೊದಲನೇ ಕಟಾವು:** ಬಿತ್ತನೆಯಾದ 40-45 ದಿನಕ್ಕೆ

**ಇಳುವರಿ:** 7ಟನ್/ಎಕರೆಗೆ

## ಫ್ರೆಂಚ್ ಬೀನ್ಸ್ (ಅರ್ಕಾ ಶರತ್)

**ಗಿಡ:** ಪೊದೆಯಾಕಾರದ ಗಿಡ, ನೇರವಾದ ಎಲೆ

**ಕಾಯಿ:** ನಾರು ರಹಿತ ದುಂಡಾಕಾರದ ರಸಭರಿತ ಕಾಯಿ, ಉದ್ದ 15-17 ಸೆಂ.ಮೀ ಉದ್ದ

**ಮೊದಲನೇ ಕಟಾವು:** ಬಿತ್ತನೆಯಾದ 40-45 ದಿನಕ್ಕೆ

**ಇಳುವರಿ:** 6-7ಟನ್/ಎಕರೆಗೆ

## ಚಂಡುಮಲ್ಲಿಗೆ (307)

**ಬೆಳೆಯ ಅವಧಿ:** 90-95 ದಿನಗಳು

**ಗಿಡ:** ಮಧ್ಯಮ ಎತ್ತರ

**ಹೂ:** ಕಡು ಹಳದಿ ಬಣ್ಣದ ದೊಡ್ಡ ಗಾತ್ರದ, ಬಹು ದಳದ ಹೂವು

**ಮೊದಲನೇ ಕಟಾವು:** ನಾಟಿಯಾದ 55ನೇ ದಿನದಿಂದ

**ಇಳುವರಿ:** 5-6ಟನ್/ಎಕರೆಗೆ

## ಚಂಡುಮಲ್ಲಿಗೆ (ಮ್ಯಾಕ್ಸಿಮಾ ಹಳದಿ)

**ಬೆಳೆಯ ಅವಧಿ:** 90-95 ದಿನಗಳು

**ಗಿಡ:** ಮಧ್ಯಮ ಎತ್ತರ, ಪೊದೆಯಾಕಾರದ ಗಿಡ. ಹೆಚ್ಚಿನ ಹೂ ಬಿಡುತ್ತದೆ

**ಹೂ:** ಕಡು ಹಳದಿ ಬಣ್ಣದ ದೊಡ್ಡ ಗಾತ್ರದ, ಬಹು ದಳದ ಹೂವು, 7-9 ಸೆಂ.ಮಿ ಸುತ್ತಳತೆ

**ಮೊದಲನೇ ಕಟಾವು:** ನಾಟಿಯಾದ 45-50 ದಿನಕ್ಕೆ

**ಇಳುವರಿ:** 4-6ಟನ್/ಎಕರೆಗೆ

## ಚಂಡುಮಲ್ಲಿಗೆ (ಅಶೋಕಾ ಹಳದಿ)

**ಬೆಳೆಯ ಅವಧಿ:** 90-95 ದಿನಗಳು

**ಗಿಡ:** ಸದೃಢವಾದ ಹೆಚ್ಚು ರೆಂಬೆಗಳುಳ್ಳ ಮಧ್ಯಮ ಎತ್ತರದ ಗಿಡ.

**ಹೂ:** ಆಕರ್ಷಕ ಒತ್ತೊತ್ತಾದ ದಳದ ಹೂವು

**ಮೊದಲನೇ ಕಟಾವು:** ನಾಟಿಯಾದ 45-50 ದಿನಕ್ಕೆ

**ಇಳುವರಿ:** 4-5ಟನ್/ಎಕರೆಗೆ

